# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಕಾರವಾರ

ಸಿ.ಸಿ. ನಂಃ 140/2014 ಪಿಡಬ್ಲ್ಯೂಃ 1

ಸಿ.ಡಬ್ಲು ಃ 1

ಸಾಕ್ಷಿಧಾರರ ಹೆಸರು ಃ ಕಲ್ಪನ ನಾಗೇಶ್ ನಾಯ್ಕ್

ವಯಸ್ಸು ಃ 35 ವರ್ಷ

ಉದ್ಯೋಗ ಃ ಶಿಕ್ಷಕಿ

ವಾಸ್ತವ್ಯ ಃ ಕಾರವಾರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 17-12-2018

***ಮುಖ್ಯ ವಿಚಾರಣೆಃ ಶ್ರೀಮತಿ ಎಪಿಪಿಯವರಿಂದ ಃ-***

ನಾನು ಪಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಘಟನೆಯ ಸಮಯದಲ್ಲಿ ನಾನು ನನ್ನ ಗಂಡ ಚಂದ್ರಕಾಂತ ಸಾಳುಂಕೆ, ಮತ್ತು ಮಗ ರಾಹುಲ್ ವಾಸಿಸುತ್ತಿದ್ದೆವು. ದಿಃ 27-03-2008 ರಂದು ಮೊದಲು ನನ್ನ ಗಂಡ ಮತ್ತು ಮಗ 8-30 ಗಂಟೆಗೆ ಹೊರಗಡೆ ಕೆಲಸಕ್ಕೆ ಹೋಗಿದ್ದು ನಾನು 9-00 ಗಂಟೆಗೆ ಮನೆಗೆ ಬೀಗ ಹಾಕಿ ಕೆಲಸಕ್ಕೆ ಹೋದೆ. 2 ಗಂಟೆಯ ಸಮಾರಿಗೆ ನನ್ನ ಮಗ ನಾನು ಕೆಲಸ ಮಾಡುತ್ತಿರುವ ಶಾಲೆಗೆ ಬಂದು ಮನೆಯ ಬೀಗ ಒಡೆದು ಒಳಗಡೆ ಬಟ್ಟೆಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ನಾನು ಬಂಗಾರದ ವಡವೆಗಳನ್ನು ಇಟ್ಟ ಡಬ್ಬ ಕೆಳಗಡೆ ಬಿದ್ದಿದೆ ಎಂದು ತಿಳಿಸಿದ. ನಾನು ಮನೆಗೆ ಬಂದು ನೋಡಿದಾಗ ಬೀಗ ಹಾಗೆ ಇದ್ದು ಕೊಂಡಿ ಮುರಿಯಲಾಗಿತ್ತು. ಮನೆಯ ಒಳಗಡೆ ಹೋಗಿ ನೋಡಿದಾಗ ಬಟ್ಟೆ ಚೆಲ್ಲಾಪಿಲ್ಲಿಯಾಗಿತ್ತು ಮತ್ತು ಮಲಗುವ ಕೋಣೆಯಲ್ಲಿ ಇದ್ದ ಕಪಾಟಿನ ಲಾಕರ್‌ನಲ್ಲಿ ಇಟ್ಟ ವಡವೆ ಹಾಗೂ ಹಣ ಇರಲಿಲ್ಲ. ನನ್ನ ಬಂಗಾರದ 2 ಕರಿಮಣಿಯ ಬಳೆ , 2 ಬಂಗಾರದ ಬಳೆ , ನೆಕ್ಲೇಸ್-1 , 2 ಕಿವಿ ಓಲೆಗಳು , 2 ಉಂಗುರಗಳು , ಮತ್ತು ನನ್ನ ಗಂಡನ ಬಂಗಾರದ ಚೈನ್ , 9,500/- ರೂ ಕಳ್ಳತನವಾಗಿತ್ತು. ನನ್ನ ಗಂಡನಿಗೆ ದೂರವಾಣಿ ಮುಖಾಂತರ ಸಂಪರ್ಕಿಸಿ ಅವರು ಚಿತ್ತಾಕುಲ ಪೋಲಿಸ್ ಠಾಣೆಗೆ ಸಂಪರ್ಕಿಸಿ ಪೋಲಿಸರೊಂದಿಗೆ ಮನೆಗೆ ಬಂದರು. ಪೊಲಿಸ್ ಠಾಣೆಗೆ ಹೋಗಿ ನಾನು ದೂರನ್ನು ಸಲ್ಲಿಸಿದೆ.

( ಈ ಪ್ರಕರಣ split up charge sheet ಆಗಿದ್ದು ಮೂಲ ಪ್ರಕರಣ ಸಿಸಿ ಸಂಖ್ಯೆ 145/2009 ರಲ್ಲಿ ಮೂಲ ದಾಖಲಾತಿಗಳು ಇದ್ದು ಈ ಪ್ರಕರಣದಲ್ಲಿ ದೃಢಿಕೃತ ದಾಖಲಾತಿಗಳನ್ನು ನೀಡಲಾಗಿದೆ) ಸಾಕ್ಷಿಗೆ ಈಗ ದೂರಿನ ದೃಢಿಕೃತ ಪ್ರತಿಯನ್ನು ತೋರಿಸುತಿತದ್ದುಅದರ ಮೇಲಿರುವ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸದ್ರಿ ದೂರನ್ನು ನಿಪಿ-1 ಎಂದು , ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ಅದೇ ದಿನ 5-30 ಗಂಟೆಯಿಂದ 7 ಗಂಟೆಗೆ ಪೋಲಿಸರು ಬಂದು ಪಂಚನಾಮೆಯನ್ನು ಮಾಡಿದ್ದು ಆ ಸಮಯಕ್ಕೆ ಗುನ್ನಾ ಸ್ಥಳವನ್ನು ನಾನು ತೋರಿಸಿದ್ದು ಆ ಸಮಯದಲ್ಲಿ ಚಾಸಾ-2 ಮತ್ತು 3 ರವರು ಹಾಜರು ಇದ್ದರು. ಸಾಕ್ಷಿಗೆ ಈಗ ಪಂಚನಾಮೆಯನ್ನು ತೋರಿಸುತ್ತಿದ್ದು ಅದರ

ಮೇಲಿರುವ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸದ್ರಿ ಪಂಚನಾಮೆಯನ್ನು ನಿಪಿ-2 ಎಂದು , ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2ಎ ಎಂದು ಗುರುತಿಸಲಾಯಿತು. ಚಿಲಕದ ಕೊಂಡಿಯನ್ನು ನಾನು ಗುರುತಿಸುತ್ತೇನೆ. ಅದನ್ನು ಮುಮಾ-1 ಎಂದು ಗುರುತಿಸಲಾಯಿತು.

ದಿಃ 01-12-2008 ರಂದು ವಿನಾಯಕ್ ಪಾಟೀಲ್ ಎಂದು ಒಬ್ಬ ಕಳ್ಳ ಸಿಕ್ಕಿದ್ದಾನೆ ಎಂದು ಠಾಣೆಗೆ ಬರಲು ಪೋಲಿಸರು ತಿಳಿಸಿದರು ಅದೇ ಪ್ರಕಾರ ನಾನು ಠಾಣೆಗೆ ಹೋದಾಗ ಪೋಲಿಸರು ನನ್ನ ಮುಂದೆ ಆತನ ವಿಚಾರಣೆ ಮಾಡಿದಾಗ ತನ್ನೊಂದಿಗೆ ರಾಜಸ್ಥಾನದ ದೀಪಕ್ ಪಟೇಲ್ ಎನ್ನುವವನು ಸಹ ಕರೆದುಕೊಂಡು ಕಳ್ಳತನ ಮಾಡಿದ ಎಂದು ತಿಳಿಸಿರುತ್ತಾನೆ. ವಿನಾಯಕ್ ಪಾಟೀಲ್‌ನಿಗೆ ಬಂಗಾರದ ಆಭರಣಗಳನ್ನು ಏನು ಮಾಡಿದೆ ಎಂದು ಕೇಳಿದಾಗ ನಾವು ಇಬ್ಬರು ಅವುಗಳನ್ನು ಹಂಚಿಕೊಂಡಿದ್ದು ತನ್ನ ಪಾಲಿನ ಆಭರಣಗಳನ್ನು ಮುಂಡಗೋಡದಲ್ಲಿ ಮಾರಾಟ ಮಾಡಿದೆ ಎಂದು ತಿಳಿಸಿದನು. ಮರುದಿನ ಪೋಲಿಸರು ಚಾಸಾ-4 ಮತ್ತು 5 ರವರನ್ನು ಕರೆದುಕೊಂಡು ಮುಂಡಗೋಡಗೆ ಹೋಗಿ ಸದ್ರಿ ಬಂಗಾರದ ಆಭರಣಗಳನ್ನು ತೆಗೆದುಕೊಂಡು ಬಂದಿರುತ್ತಾರೆ. ಅವುಗಳನ್ನು ಅವರು ಅದೇ ದಿನ ಅಂದರೆ 02-12-2008 ರಂದು ತೋರಿಸಿ ನಾನು ಅವುಗಳನ್ನು ನನ್ನದೇ ಎಂದು ಗುರುತಿಸುತ್ತೇನೆ. ವಿನಾಯಕ್ ಪಾಟೀಲ್‌ನನ್ನು ಕಳ್ಳತನ ಮಾಡಿದ ಜಾಗೆಯನ್ನು ತೋರಿಸಲು ನಮ್ಮ ಮನೆಗೆ ಕರೆದುಕೊಂಡು ಬರಾದಗ ಸಹ ನೋಡಿರುತ್ತೇನೆ. (ಮಧ್ಯಂತರ ಅರ್ಜಿಯ ಆದೇಶದ ಪ್ರಕಾರ ಫಿರ್ಯಾದುದಾರಿಗೆ ನೀಡಿದ್ದು ಅವುಗಳನ್ನು ಅವರು ಹಾಜರುಪಡಿಸಿರುತ್ತಾರೆ) ನೆಕ್ಲೆಸ್‌ನ್ನು ಮುಮಾ-2 , ಕಿವಿ ಓಲೆಗಳನ್ನು ಮುಮಾ-3 ಮತ್ತು 4 ಎಂದು , ಹಾಗೂ ಬಂಗಾರದ ಉಂಗುರವನ್ನು ಮುಮಾ-5 ಎಂದು ಗುರುತಿಸಲಾಯಿತು.

(ಸಸಅ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಮಾಡಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು)

***ಪಾಟೀ ಸವಾಲುಃ ಶ್ರೀಮತಿ ಎಪಿಪಿ ಯವರಿಂದ***

ವಿನಾಯಕ್ ಪಾಟೀಲ್‌ನು ತಾನು ಮತ್ತು ದೀಪಕ್ ಪಟೇಲ್ ಇಬ್ಬರು ಸೇರಿ ಮುಂಡಗೋಡದಲ್ಲಿ ಬಂಗಾರದ ಆಭರಣಗಳನ್ನು ಮಾರಾಟ ಮಾಡಿರುತ್ತಾನೆ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ.

***ಪಾಟೀ ಸವಾಲುಃ ಶ್ರೀ ಪಿ ಬಿಟಿ ಯವರಿಂದ***

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾವು ಮನೆಯ ಜನರೆಲ್ಲರೂ ಬೆಳಿಗ್ಗೆ ಹೋಗಿ ಸಂಜೆಯೇ ತಿರುಗಿ ಬರುತ್ತೇವೆ ಎಂದರೆ ಆ ದಿನ ಪರೀಕ್ಷೆ ಇದ್ದ ಕಾರಣ ಮಗ ಬೇಗ ವಾಪಾಸು ಬಂದ ಎಂದು ಸಾಕ್ಷಿಯು ನುಡಿಯುತ್ತಾರೆ. ನನ್ನ ಮಗ 2 ಗಂಟೆಯ ಸುಮಾರಿಗೆ

ಬಂದ. ಬೆಳಿಗ್ಗೆ 10 ರಿಂದ 2 ಗಂಟೆಯ ನಡುವೆ ಏನಾಯ್ತು ಎಂದು ಯಾರಿಗೂ ಗೊತ್ತಾಗುವುದಿಲ್ಲ ಎಂದರೆ ಸರಿ. ಫಿರ್ಯಾದನ್ನು ಪೊಲೀಸರೇ ಬರೆದಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಾನು ನೀಡಿದ ಹೇಳಿಕೆ ದೂರನ್ನು ಸ್ವೀಕರಿಸಿ ನನಗೆ ತಿಳಿಸಿ ಹೇಳಿ ಬರೆದಿದ್ದಾರೆ ಎಂದು ನುಡಿಯುತ್ತಾರೆ. ಫಿರ್ಯಾದನ್ನು ಪೋಲಿಸರು ತಮಗೆ ಹೇಗೆ ಬೇಕೋ ಹಾಗೇ ಬರೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಆಭರಣಗಳು ನನ್ನದೇ ಎಂದು ತೋರಿಸಲು ರಶೀದಿಗಳು ಇವೆಯಾ ಎಂದರೆ ಇವೆ ಹಾಜರು ಪಡಿಸಿಲ್ಲ ಎಂದರೆ ಪೋಲಿಸರು ಕೇಳಿಲ್ಲ ಆದ್ದರಿಂದ ಹಾಜರು ಪಡಿಸಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಕಳ್ಳತನವಾದ ನಗದಿನ ಮುಖ ಬೆಲೆ ಗೊತ್ತಿದೆಯಾ ಎಂದರೆ ಘಟನೆಯಾಗಿ ಬಹಳ ವರ್ಷಗಳಾದ ಕಾರಣ ನೆನಪಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಚಾಸಾ-2 ಮತ್ತು 3 ನಮ್ಮ ಮನೆಯ ಅಕ್ಕಪಕ್ಕದವರು. ಘಟನಾ ಸ್ಥಳದಲ್ಲಿ ಯಾವುದೇ ಪಂಚನಾಮೆಯನ್ನು ಬರೆದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ವಿನಾಯಕ್ ಪಾಟೀಲ್ ತನು 2 ನೇ ಆರೊಪಿತನ ಹೆಸರು ತೆಗೆದುಕೊಂಡಿಲ್ಲ ,ಕಳ್ಳತನಕ್ಕೂ ಮತ್ತು ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಎಲ್ಲಾ ವಿಷಯ ಪೋಲಿಸರು ಹೇಳಿದ ನಂತರವೇ ನನಗೆ ಗೊತ್ತಾಯ್ತು ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ನಾನು ನೀಡಿದ ಫಿರ್ಯಾದಿಗೂ ಹಾಗೂ ಆರೊಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು.)***

***ಓ. ಹೇ. ಕೇ. ಸರಿ ಇದೆ.***

**ಹೆ. ಪ್ರ. ದ. ನ್ಯಾ. ದಂ. ಕಾರವಾರ**